ಸ್ಥಾಪನೆ : 1997

080-22280566
080-22375507
74117 52827

# ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ನೋಂದಣಿ ಕ್ರಮಾಂಕ : ಜೆ.ಆರ್.ಬಿ. : ಆರ್.ಜೆ.ಎನ್. ಸೌಕಾ : 36:159:05-06)
ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್,
ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು - 560 053
Website : www.suprajasouhardha.com
e-mail:- supraja_souhardha@rediffmail.com
supraja.souhardha@gmail.com

## ಇಪ್ಪತ್ತಾರನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆ (2022-2023)

**ದಿನಾಂಕ : 10-09-2023, ಭಾನುವಾರ**

**ಬೆಳಿಗ್ಗೆ 10.30 ಗಂಟೆಗೆ**

ಸ್ಥಳ :

**ಶಾರದಾ ಸ್ತ್ರೀ ಸಮಾಜ ಟ್ರಸ್ಟ್ (ನೋಂ.)**

ನಂ. 39, ಶತಮಾನೋತ್ಸವ ಭವನ, 1ನೇ ಮುಖ್ಯ ರಸ್ತೆ,
ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018

**ವಿಶೇಷ ಸೂಚನೆ : -**

1. ಸದಸ್ಯರು ಸಾಮಾನ್ಯ ಸಭೆಗೆ ಆಗಮಿಸುವಾಗ ತಪ್ಪದೇ ಮಹಾಸಭೆಯ ಸೂಚನಾ ಪತ್ರ ಹಾಗೂ ಸಹಕಾರಿಯ ಸದಸ್ಯತ್ವದ ಗುರುತಿನ ಚೀಟಿಯೊಡನೆ ಬರಬೇಕಾಗಿ ಕೋರಲಾಗಿದೆ.
2. ಸಹಕಾರಿಯ ಸದಸ್ಯತ್ವದ ಗುರುತಿನ ಚೀಟಿ ಮತ್ತು ಷೇರು ಪ್ರಮಾಣ ಪತ್ರವನ್ನು ಪಡೆಯದೇ ಇರುವ ಸದಸ್ಯರು ತಮ್ಮ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ಸಹಕಾರಿಗೆ ಬಂದು ಖುದ್ದಾಗಿ ಪಡೆಯತಕ್ಕದ್ದು.
3. ಸಾಮಾನ್ಯ ಸದಸ್ಯರ ಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ಸ್ಪಷ್ಟೀಕರಣ ಅಥವಾ ಪ್ರಶ್ನೆ ಕೇಳಬಯಸುವ ಸುಸ್ತಿದಾರರಲ್ಲದ ಸದಸ್ಯರು ಸಭೆಯು ನಡೆಯುವುದಕ್ಕೆ 07 ದಿವಸ ಮುಂಚಿತವಾಗಿ ಮುಖ್ಯಕಾರ್ಯನಿರ್ವಾಹಕರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಅದರಂತೆ ಯಾವುದಾದರೂ ಕೋರಿಕೆ ಸಲ್ಲಿಸಿದ್ದಲ್ಲಿ ಸಭೆಯಲ್ಲಿ ಚರ್ಚಿಸಲಾಗುವುದು.
4. ಸದಸ್ಯರುಗಳು ಕಳೆದ ಮೂರು ವರ್ಷ ಮತ್ತು ಮೇಲ್ಪಟ್ಟ ಅವಧಿಯ ಲಾಭಾಂಶವನ್ನು (Dividend) ಪಡೆಯದೇ ಇದ್ದಲ್ಲಿ ಸಹಕಾರಿಗೆ ಬಂದು ಪಡೆಯಲು ವಿನಂತಿ. ಇಲ್ಲವಾದಲ್ಲಿ ಅವರ 2020-21ನೇ ಸಾಲಿನ ಲಾಭಾಂಶವನ್ನು ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
5. ಸಾಮಾನ್ಯ ಸದಸ್ಯರ ಸಭೆಯ ಮುಕ್ತಾಯದ ನಂತರ ಭೋಜನ ವ್ಯವಸ್ಥೆಯಿರುತ್ತದೆ.
6. ಸಾಮಾನ್ಯ ಸದಸ್ಯರ ಸಭೆಗೆ ಬರುವ ಪ್ರಥಮ 250 ಸದಸ್ಯರಿಗೆ ವಿಶೇಷ ಉಡುಗೊರೆ ನೀಡಲಾಗುವುದು.
7. ಸದಸ್ಯರು ಇಲ್ಲಿಯವರೆವಿಗೂ ತಮ್ಮ ದೂರವಾಣಿ ಸಂಖ್ಯೆ, ಆಧಾರ್ ಸಂಖ್ಯೆ, ಪ್ಯಾನ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನುನೀಡದೇ ಇರುವವರು ಸಹಕಾರಿಯ ಮೊಬೈಲ್ ಫೋನ್ ನಂಬರ್ 74117 52827 ಗೆ ವಾಟ್ಸಾಪ್ / ಮೆಸೇಜ್ ಮುಖಾಂತರ ಕಳುಹಿಸಲು ವಿನಂತಿಸಲಾಗಿದೆ.

# ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು-560 053.
ದೂರವಾಣಿ : 22280566 / 22375507, 7411752827

## 26ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಸೂಚನಾ ಪತ್ರ

ಆತ್ಮೀಯ ಸದಸ್ಯರೇ,

ನಮ್ಮ ಸಹಕಾರಿಯ 2022-23ನೇ ಸಾಲಿನ ಸಾಮಾನ್ಯ ಸದಸ್ಯರ ಸಭೆಯನ್ನು **ದಿನಾಂಕ 10-09-2023** ರಂದು ಭಾನುವಾರ ಬೆಳಿಗ್ಗೆ 10.30 ಕ್ಕೆ **ಶಾರದಾ ಸ್ತ್ರೀ ಸಮಾಜ ಟ್ರಸ್ಟ್ (ನೋಂ.),** ನಂ. 39, ಶತಮಾನೋತ್ಸವ ಭವನ, 1ನೇ ಮುಖ್ಯ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018, ರಲ್ಲಿನ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಶಿವರುದ್ರಪ್ಪರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

### ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ ಭಾಷಣ
3. 2022-23ನೇ ಸಾಲಿನ 26ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
4. ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಭೆ ನಡುವೆ ದೈವಾಧೀನರಾದ ಸದಸ್ಯರ ಆತ್ಮಕ್ಕೆ ಚಿರಶಾಂತಿ ಕೋರುವುದು.
5. ದಿನಾಂಕ 21-08-2022 ರಂದು ನಡೆದ 25ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.
6. 2022-23ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಅನುಮೋದಿಸುವುದು.
7. 2022-23ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಯನ್ನು ಪರಿಗಣಿಸಿ ಅನುಮೋದಿಸುವುದು.
8. 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
9. 2022-23ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯನ್ನು ಅನುಮೋದಿಸುವುದು.
10. 2023-24ನೇ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗಾಗಿ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
11. 2022-23ನೇ ಸಾಲಿನ ಬಜೆಟ್‌ನ ಹೆಚ್ಚು / ಕಡಿಮೆ ವಾಸ್ತವಿಕ ಖರ್ಚಿನ ಅನುಮೋದನೆ ಹಾಗೂ 2023-24ನೇ ಸಾಲಿನ ವಾರ್ಷಿಕ ಮುಂಗಡ ಪತ್ರ (ಬಜೆಟ್) ಅನುಮೋದಿಸುವುದು.
12. ಸೂಕ್ತ ಮುನ್ಸೂಚನೆಯಂತೆ ಲಿಖಿತ ಪತ್ರದ ಮೂಲಕ ಬಂದ ಪ್ರಶ್ನೆಗಳು - ಸ್ಪಷ್ಟೀಕರಣ.
13. (ಅ) ಸಹಕಾರಿಯ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ.
    (ಆ) 80 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಹಿರಿಯ ಸಹಕಾರಿ ಸದಸ್ಯರಿಗೆ ಸನ್ಮಾನ.
14. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.
15. ವಂದನಾರ್ಪಣೆ.

ಆಡಳಿತ ಮಂಡಳಿಯ ಆದೇಶದ ಮೇರೆಗೆ
ಸಹಿ/-
ಹೆಚ್. ನರಸಿಂಹಮೂರ್ತಿ
ಮುಖ್ಯ ಕಾರ್ಯನಿರ್ವಾಹಕರು

ಸ್ಥಳ : ಬೆಂಗಳೂರು
ದಿನಾಂಕ : 18-08-2023

## ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಸದಸ್ಯರುಗಳ ಮಕ್ಕಳು ಪ್ರತಿಭಾ ಪುರಸ್ಕಾರಗಳನ್ನು ಪಡೆಯಲು 2022-23ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 90ಕ್ಕಿಂತ ಹೆಚ್ಚು (ಸಿ.ಬಿ.ಎಸ್.ಸಿ./ಐ.ಸಿ.ಎಸ್.ಸಿ.ಯಲ್ಲಿ ಎ+ ಶ್ರೇಣಿ), ದ್ವಿತೀಯ ಪಿ.ಯು.ಸಿ.ಯಲ್ಲಿ ಶೇ. 85 ಕ್ಕಿಂತ ಹೆಚ್ಚು, ಅಂತಿಮ ಪದವಿ ಪರೀಕ್ಷೆಯಲ್ಲಿ ಶೇ. 75ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿ ತೇರ್ಗಡೆಯಾದವರ ಅಂಕಪಟ್ಟಿಯನ್ನು ದಿನಾಂಕ 31/08/2023 ರೊಳಗಾಗಿ ಸಹಕಾರಿಗೆ ತಲುಪಿಸಬೇಕಾಗಿ ವಿನಂತಿ.

## 80 ವರ್ಷ ಮೇಲ್ಪಟ್ಟ ಹಿರಿಯ ಸದಸ್ಯರಿಗೆ ಸನ್ಮಾನ

ಸಹಕಾರಿಯು 80 ವರ್ಷ ಮೇಲ್ಪಟ್ಟ ಸದಸ್ಯರುಗಳನ್ನು ಪ್ರತಿವರ್ಷದಂತೆ ಈ ವರ್ಷವೂ ಸಾಮಾನ್ಯ ಸದಸ್ಯರ ಸಭೆಯಲ್ಲಿ ಸನ್ಮಾನಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಇಲ್ಲಿಯವರೆಗೂ ಈ ಹಿಂದೆ ನಡೆದ ಸರ್ವ ಸದಸ್ಯರ ಸಭೆಗಳಲ್ಲಿ ನಮ್ಮಿಂದ ಸನ್ಮಾನ ಪಡೆಯದೇ ಇರುವ 80 ವರ್ಷ ಮೇಲ್ಪಟ್ಟ ಹಿರಿಯ ಸದಸ್ಯರುಗಳು ತಮ್ಮ ವಿವರವನ್ನು ಕಳುಹಿಸಬೇಕೆಂದು ಕೋರಲಾಗಿದೆ.

## ಸದಸ್ಯತ್ವ ಬಗ್ಗೆ ಕೆಲವು ಮುಖ್ಯ ನಿಯಮಗಳು

ಆತ್ಮೀಯ ಸದಸ್ಯರೇ

ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿರುವ ಕನಿಷ್ಠ ಮಟ್ಟದ ಸಹಕಾರಿಯ ಸೇವೆಯನ್ನು ಸತತ ಎರಡು (ಸಹಕಾರ ವರ್ಷಗಳವರೆಗೆ) ಬಳಸಿಕೊಂಡಿಲ್ಲದಿದ್ದರೇ ಅಥವಾ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತ ಮತ್ತು ಅವಧಿಯನ್ನು ಮೀರಿ ಸಹಕಾರಿಗೆ ಮಾಡಬೇಕಾದ ಯಾವುದೇ ಸಂದಾಯವನ್ನು ಮಾಡಲು ವಿಫಲವಾದರೆ, ಅಂಥ ವ್ಯಕ್ತಿಯು ಸದಸ್ಯನಾಗಿ ಮುಂದುವರೆಯಲು ಅರ್ಹನಾಗಿರತಕ್ಕದ್ದಲ್ಲ.

ಸಹಕಾರಿಯ ಯಾವುದೇ ಬಾಕಿಗಳಿಗೆ ಸುಸ್ತಿದಾರನಾಗಿದ್ದರೆ, ಹಿಂದಿನ ಐದು ಮಹಾಸಭೆಯ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಹಾಗೂ ಹಿಂದಿನ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡದಿದ್ದರೆ ಅಂತಹ ಸದಸ್ಯನು ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿಯ ಚುನಾವಣೆಯಲ್ಲಿ ಮತದಾನ ಮಾಡಲು ಮುಂದಿನ ಒಂದು ವರ್ಷದವರೆಗೆ ಅನರ್ಹಗೊಳ್ಳುತ್ತಾನೆ.

ಪ್ರತಿ ಸದಸ್ಯರು ಸಹಕಾರಿಯ ಸದಸ್ಯತ್ವಕ್ಕೆ ಕೆ.ವೈ.ಸಿ. ದಾಖಲಾತಿಗಳನ್ನು ಅಂದರೆ ವಿಳಾಸದ ದಾಖಲೆ, ಪ್ಯಾನ್ ಹಾಗೂ ಆಧಾರ್ ಕಾರ್ಡ್ ಪ್ರತಿಯನ್ನು ನೀಡಬೇಕು. ಇಲ್ಲಿಯವರೆಗೆ ನೀಡದಿರುವ ಸಹಕಾರಿಯ ಸದಸ್ಯರುಗಳು 2020-21ನೇ ಸಾಲಿನ ಡಿವಿಡೆಂಡ್‌ಗಳನ್ನು ಸೌಹಾರ್ದದ ಮಾರ್ಗದರ್ಶನ, ಕಾಯ್ದೆ ಹಾಗೂ ಸಹಕಾರಿಯ ಉಪವಿಧಿಯಂತೆ ಸಹಕಾರಿಯ ಮೀಸಲು ನಿಧಿಗೆ ವರ್ಗಾಯಿಸಲಾಗುವುದು. ಆದುದರಿಂದ ಈ ದಾಖಲಾತಿಗಳನ್ನು 30-09-2023 ರೊಳಗಾಗಿ ಸಲ್ಲಿಸುವಂತೆ ಕೋರಲಾಗಿದೆ.

ಸದಸ್ಯರುಗಳು ತಮ್ಮ ಉಳಿತಾಯ ಖಾತೆಯಲ್ಲಿ 2 ವರ್ಷಗಳು ಮೀರಿ ವ್ಯವಹರಿಸದಿದ್ದಲ್ಲಿ ಕೆ.ವೈ.ಸಿ. ದಾಖಲಾತಿ, (ಪ್ಯಾನ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆ) ನೀಡದಿರುವ ಸದಸ್ಯರ ಉಳಿತಾಯ ಠೇವಣಿ ಖಾತೆಯನ್ನು ನಿಷ್ಕ್ರಿಯ ಖಾತೆಯೆಂದು ವರ್ಗಾಯಿಸಲಾಗುವುದು.

## ಪ್ರಗತಿಯ ಪಥದಲ್ಲಿ ನಿಮ್ಮ ಸಹಕಾರಿ (ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ವಿವರಗಳು | 2017–18 | 2018–19 | 2019–20 | 2020–21 | 2021–22 | 2022–23 |
|---|---|---|---|---|---|---|---|
| 1 | ಠೇವಣಿಗಳು | 3355.99 | 3362.29 | 3400.67 | 3416.71 | 3200.61 | 2769.48 |
| 2 | ಸಾಲಗಳು | 2604.09 | 2491.54 | 2770.60 | 2426.39 | 1887.31 | 1759.34 |
| 3 | ಹೂಡಿಕೆಗಳು | 1757.66 | 1787.47 | 1559.32 | 2112.88 | 2388.37 | 2598.87 |
| 4 | ದುಡಿಯುವ ಬಂಡವಾಳ | 4275.29 | 4381.63 | 4651.92 | 4777.22 | 4596.36 | 4269.56 |
| 5 | ನಿವ್ವಳ ಲಾಭ | 166.65 | 164.07 | 161.02 | 170.09 | 179.09 | 189.96 |
| 6 | ಲಾಭಾಂಶ | 25% | 25% | 25% | 25% | 25% | 25% |
| 7 | ಮೀಸಲು ನಿಧಿ | 304.38 | 345.40 | 385.66 | 428.18 | 472.96 | 520.45 |
| 8 | ಇತರ ಮೀಸಲು ನಿಧಿಗಳು | 451.29 | 524.25 | 604.50 | 691.11 | 782.02 | 838.25 |

### ನಿರ್ದೇಶಕ ಮಂಡಳಿ

ಶ್ರೀ ಎಂ. ಶಿವರುದ್ರಪ್ಪ — ಅಧ್ಯಕ್ಷರು
ಶ್ರೀ ಬಿ.ಆರ್. ಜಯದೇವ — ಉಪಾಧ್ಯಕ್ಷರು

ಶ್ರೀ ಟಿ.ವಿ.ಟಿ. ಪ್ರಕಾಶ್ — ನಿರ್ದೇಶಕರು
ಶ್ರೀ ಎನ್.ಎನ್. ಕಾಂತರಾಜ್ — ನಿರ್ದೇಶಕರು
ಶ್ರೀ ಎಂ. ಮಹೇಶ್ — ನಿರ್ದೇಶಕರು
ಶ್ರೀಮತಿ ಎಂ.ಎಸ್. ವೀಣಾ — ನಿರ್ದೇಶಕರು
ಶ್ರೀಮತಿ ಮುಕ್ತಾ ಶಿವರುದ್ರಪ್ಪ — ನಿರ್ದೇಶಕರು
ಶ್ರೀ ಎನ್. ಸುಧಾಮ — ನಿರ್ದೇಶಕರು

ಶ್ರೀ ಎಸ್.ಸಿ. ಜಯಕುಮಾರ್ — ನಿರ್ದೇಶಕರು
ಶ್ರೀ ಎಂ. ರಾಜೇಂದ್ರನ್ — ನಿರ್ದೇಶಕರು
ಶ್ರೀ ಎಂ. ಮಲ್ಲಿಕಾರ್ಜುನ — ನಿರ್ದೇಶಕರು
ಶ್ರೀ ಬಿ.ವಿ. ಪ್ರಸನ್ನ ಕುಮಾರ್ — ನಿರ್ದೇಶಕರು
ಶ್ರೀ ಕೆ.ಎನ್. ವೆಂಕಟರಾಮ್ — ವೃತ್ತಿಪರ ನಿರ್ದೇಶಕರು

ಶ್ರೀ ಹೆಚ್. ನರಸಿಂಹಮೂರ್ತಿ — ಮುಖ್ಯ ಕಾರ್ಯನಿರ್ವಾಹಕರು
ಶ್ರೀ ಎಂ.ಎಸ್. ಜಗದೀಶ್ — ವ್ಯವಸ್ಥಾಪಕರು

---

ಅಂಚೆ ದೃಢೀಕರಣ ಪಡೆದಿದೆ

ತೆರೆದ–ಅಂಚೆ

ಗೆ,


ಇಂದ :

**ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್**
ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್,
ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು–560 053.
**ದೂರವಾಣಿ : 22280566 / 22375507 / 74117 52827**